# 3 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು

# ಜೆ.ಎಂ.ಎಫ್.ಸಿ. ನ್ಯಾಯಾಲಯ, ಹುಬ್ಬಳ್ಳಿ

**CC No.910/2023** **PW- 5**

ದಿಃ **23.07.2026** ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.

**ಪಾಟಿಸವಾಲುಃ ಆರೋಪಿ ಪರ ಶ್ರೀ ಎಮ್ ಜಿ ಎ ವಕೀಲರಿಂದಃ**

ದೂರನ್ನು ನಾನೇ ತಯಾರಿಸಿದ್ದೇನೆ ಎಂದರೆ ಸರಿಯಲ್ಲ. ನಮ್ಮ ಸಿಬ್ಬಂದಿ ತಂದು ಕೊಟ್ಟಿದ್ದಾರೆ. ಘಟನಾ ಸ್ಥಳ ನಮ್ಮ ಠಾಣೆಯಿಂದ ಅಂದಾಜು ಎರಡೂವರೆಯಿಂದ 3 ಕಿ ಮಿ ಇದೆ. ಪೊಲಿಸ್ ಠಾಣೆಗೆ ಮದ್ಯಾಹ್ನ 3.05 ಕ್ಕೆ ಪಂಚರನ್ನು ಕರೆಸಿದೆ. ಠಾಣೆ ಬಿಟ್ಟಾಗ 3.10 ಆಗಿತ್ತು. 3.25 ಕ್ಕೆ ಘಟನಾ ಸ್ಥಳ ತಲುಪಿದೆ. ನಾವು ಒಟ್ಟು 5 ಜನ ಹೋದೆವು. ನಮ್ಮ ನಮ್ಮ ವಾಹನದಲ್ಲಿ ಹೋದೆವು. ಅವು ನಮ್ಮ ಖಾಸಗಿ ವಾಹನ ಆಗಿವೆ. ಘಟನಾ ಸ್ಥಳ ಜನಸಂಚಾರ ಸ್ಥಳ ಎಂದರೆ ಸರಿ. ನಾವು ಹೋದಾಗ ಅಲ್ಲಿ ಇಬ್ಬರು ವ್ಯಕ್ತಿಗಳು ಓಡಿಹೋದರು. ಅವರನ್ನು ಹಿಡಿಯಲು ಪ್ರಯತ್ನಿಸಿದೆವು ಆದರೆ ಅವರು ಸಿಕ್ಕಿಲ್ಲ. ನಾವು ಹಿಡಿಯಲು ಪ್ರಯತ್ನ ಮಾಡಿದ್ದೇವೆ ಅಂತಾ ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ಅದೇ ರೀತಿ ಅಲ್ಲಿ ಯಾರು ಓಡಿಹೋಗಿಲ್ಲ ಎಂದರೆ ಸರಿಯಲ್ಲ. ಆ ವ್ಯಕ್ತಿಗಳು ಹಾಗೆ ಓಡಿಹೋಗಿದ್ದಾರೆ. ಘಟನಾ ಸ್ಥಳದ ಸ್ಥಳಿಯರ ಹೇಳಿಕೆ ಪಡೆದಿಲ್ಲ. ನಾನು ಘಟನಾ ಸ್ಥಳಕ್ಕೆ ಹೋಗಿಲ್ಲ, ದಾಳಿಯೂ ಮಾಡಿಲ್ಲ, ಯಾವದೇ ಆರೋಪಿಗಳು ಸಿಕ್ಕಿಲ್ಲ ಹಾಗೂ ವಸ್ತುಗಳು ಜಪ್ತಿಯಾಗಿಲ್ಲ ಎಂದರೆ ಸರಿಯಲ್ಲ. ಹುಬ್ಬಳ್ಳಿ ದಾರವಾಡ ಮುಖ್ಯರಸ್ತೆಯಿಂದ ಘಟನಾ ಸ್ಥಳ 2 ಕಿ ಮಿ ದೂರ ಇದೆ. ಘಟನಾ ಸ್ಥಳ ರಾಯಲ್ ರಿಜ್ ಹೊಟೆಲ್ ಹತ್ತಿರ ಆಗಿದೆ. ಮುಖ್ಯ ರಸ್ತೆಯಿಂದ ಘಟನಾ ಸ್ಥಳಕ್ಕೆ ಹೋಗಲು 10 ರಿಂದ 15 ನಿಮಿಷ ಬೇಕು. ಮುಖ್ಯ ರಸ್ತೆಗೆ ಹೊಂದಿಕೊಂಡಂತೆ 2 ಬಾರ್ ಆಂಡ ರೆಸ್ಟೊರಂಟಗಳು ಇವೇ ಎನ್ನುವುದು ನನ್ನ ಗಮನಕ್ಕೆ ಇಲ್ಲ. ಅಲ್ಲಿ ಎಮ್ ಆರ್ ಪಿ ಔಟಲೆಟಗಳು ಇವೆ ಎನ್ನುವುದು ನೆನಪಿಲ್ಲ. ಎಪಿಎಂಸಿ ಹತ್ತಿರನೂ ಸಹ 4 ಬಾರ್ ಆ್ಯಂಡ ರಸ್ಟೊರಂಟಗಳು ಮತ್ತು ಎಮ್ ಆರ್ ಪಿ ಔಟಲೆಟಗಳು ಇವೆ ಎನ್ನುವುದು ಗೊತ್ತಿಲ್ಲ. ಇಷ್ಟೆಲ್ಲ ಬಾರ್ ಅಂಗಡಿಗಳು ಈ ಸ್ಥಳದಲ್ಲಿ ಇರುವುದರಿಂದ ಆರೋಪಿತರು ಅಕ್ರಮವಾಗಿ ಮದ್ಯ

ಮಾರಾಟ ಮಾಡುವ ಪ್ರಸಂಗ ಬರುವುದಿಲ್ಲ ಎಂದರೆ ಸರಿಯಲ್ಲ. ನಾನು ಹೇಳಿದಂತೆ ಆ ದಿವಸ ಯಾರು ಮದ್ಯವನ್ನು ಅಕ್ರಮವಾಗಿ ಮಾರಾಟ ಮಾಡಿಲ್ಲ ಮತ್ತು ಘಟನೆಯೂ ನಡೆದಿಲ್ಲ ಎಂದರೆ ಸರಿಯಲ್ಲ. ಘಟನಾ ಸ್ಥಳದಲ್ಲಿ ಯಾವದೇ ಪಂಚನಾಮೆನೂ ಇಲ್ಲ ಹಾಗೂ ವಸ್ತುಗಳನ್ನು ಜಪ್ತಿ ಮಾಡದೇ ಫೋಟೊಗಳನ್ನು ತೆಗೆಯದೇ ಪೂರ್ವ ನಿಯೋಜಿತ ಒಂದು ಸ್ಟೋರಿ ತಯಾರಿಸಿ ಅದಕ್ಕೆ ಪೂರಕವಾಗುವಂತೆ ತನಿಖೆ ಮಾಡಿದ್ದೇನೆ ಎಂದರೆ ಸರಿಯಲ್ಲ. ನಾನು ಯಾವದೇ ದಾಳಿನೂ ಮಾಡಿಲ್ಲ, ತನಿಖೆಯೂ ಮಾಡಿಲ್ಲ, ಮುದ್ದೆಮಾಲುಗಳಿಗೂ ಮತ್ತು ಆರೋಪಿತರಿಗೂ ಯಾವದೇ ಸಂಬಂದವಿಲ್ಲ ಎಂದರೆ ಸರಿಯಲ್ಲ. ನಮ್ಮ ಠಾಣೆಯಲ್ಲಿರುವ ಬೇನಾಮಿ ಮುದ್ದೆಮಾಲುಗಳನ್ನು ಅಮಾಯಕರಾದ ಆರೋಪಿತರ ಮೇಲೆ ಈ ಪ್ರಕರಣದಲ್ಲಿ ಸಿಲುಕಿಸಿ ಅವರ ಮೇಲೆ ಸುಳ್ಳು ಪ್ರಕರಣ ದಾಖಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆಂದರೆ ಸರಿಯಲ್ಲ. ಇದರಲ್ಲಿ ಯಾವದೇ ರೀತಿಯಿಂದ ಆರೋಪಿತರು ಅಪರಾಧ ಮಾಡಿದ್ದಾರೆ ಎಂಬ ಬಗ್ಗೆ ಸಾಕ್ಷಿ ಆದಾರಗಳು ಇರದೇ ಇದ್ದರೂ ಸಹ ಸುಳ್ಳು ದೋಷಾರೋಪಣೆ ಪಟ್ಟಿಯನ್ನು ಠಾಣೆಯ ಅಂಕಿ ಸಂಖ್ಯೆ ತೋರಿಸೊಗೊಸ್ಕರ ದಾಖಲಿಸಿದ್ದೇನೆ ಎಂದರೆ ಸರಿಯಲ್ಲ.

(ನನ್ನ ಉಕ್ತಲೇಖದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೆ ಸರಿ ಇದೆ.

**(**ಶ್ರೀ ರಮೇಶ ಎಸ್ ಗಾಣಿಗೇರ**)**

**3** ನೇ ಅಧಿಕ ಹಿ.ದಿ.ನ್ಯಾ.ಹುಬ್ಬಳ್ಳಿ**.**